# ಆರಾಧನೆಗೆ ಕೃಷ್ಣ ಸಾಂಗತ್ಯಕ್ಕೆ ರಾಮ

**ರಾಧಿಕಾ ರಾವ್ ಝೀ ಕನ್ನಡದ 'ರಾಧಾ ಕಲ್ಯಾಣ'ದ ರಾಧಾ**

◆ **'ರಾಧಾ ಕಲ್ಯಾಣ' ಈ ಹಿಂದೆ ಪ್ರಸಾರವಾಗಿತ್ತು. ಅದೇ ಹೆಸರಿನ ಹೊಸ ಅವತರಣಿಕೆ ಏನಿದರ ವಿಶೇಷ?**

ಟ್ರೆಂಡ್‌ಗೆ ಅನುಗುಣವಾಗಿ ಕತೆ ತನ್ನ ಹರವನ್ನು ಪಡೆದುಕೊಂಡಿದೆ. ಹಿಂದಿನ ಧಾರಾವಾಹಿಯ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಅದರ ಬಗ್ಗೆ ಕೇಳಿ ತಿಳಿದುಕೊಂಡಿದ್ದೇನೆ. ಇವತ್ತು ವೀಕ್ಷಕರು ಬಯಸುವ ಕಥೆಗೆ ಅನುಗುಣವಾಗಿ ಇದು ರೂಪಿತವಾಗಿದೆ. ಆದರ್ಶ ಕೌಟುಂಬ ಚಿತ್ರಿತವಾಗಿದೆ. ಸಂಸಾರ ಎಂದ ಮೇಲೆ ಸಣ್ಣಪುಟ್ಟ ಜಗಳಗಳು ಬರುತ್ತವೆ. ಎಲ್ಲೂ ಹಿಂಸೆ ನೀಡುವ ಸಂದರ್ಭ ಎದುರಾಗುವುದಿಲ್ಲ. ಹಿಂದಿನ 'ರಾಧಾ ಕಲ್ಯಾಣ' ತುಂಬ ಪ್ರಸಿದ್ಧಿಯನ್ನು ಪಡೆದಿತ್ತು. ಆ ಕಾರಣಕ್ಕೆ ನಮಗೆ ಜವಾಬ್ದಾರಿ ಹೆಚ್ಚಿದೆ. ಏಕೆಂದರೆ ಬೇರೆ ಯಾವುದೇ ಹೆಸರು ಇಟ್ಟಿದ್ದರೂ ಅದು ನಮಗೆ ಅಷ್ಟು ಸವಾಲಾಗುತ್ತಿರಲಿಲ್ಲ. ಹಿಂದಿನ ಧಾರಾವಾಹಿಯ ಮಟ್ಟಕ್ಕೆ ನಾವು ಏರದಿದ್ದರೂ ಅದರ ಅರ್ಧದಷ್ಟಾದರೂ ಮುಟ್ಟಬೇಕು ಎನ್ನುವ ಹೊಣೆಗಾರಿಕೆ ಇದೆ. ನಾವು ಆ ನಿಟ್ಟಿನಲ್ಲಿ ಸಾಗುತ್ತಿದ್ದೇವೆ ಎನ್ನವ ಸಮಾಧಾನ ನಮಗಿದೆ.

◆ **ಶ್ರೀರಾಮಚಂದ್ರನಂತ ಗಂಡನ ಬಯಕೆ ಇರುತ್ತದೆ, ಕೃಷ್ಣನಂತಹ ಪತಿ ನಿಮಗೆ ಸಿಗುತ್ತಾನೆ ಈ ವೈರುಧ್ಯವನ್ನು ಹೇಗೆ ನಿಭಾಯಿಸುತ್ತೀರಿ?**

ಇಲ್ಲಿ ನನ್ನ ತಾಳ್ಮೆಯೇ ಎಲ್ಲದಕ್ಕೂ ಉತ್ತರ ಕೊಡುತ್ತಾ ಹೋಗುತ್ತದೆ. ಈ ತಾಳ್ಮೆಯೇ ಪತಿ ಆದವರಿಗೂ ಇಷ್ಟ ಆಗುತ್ತದೆ. ಸಾಮಾನ್ಯವಾಗಿ ಕೃಷ್ಣನಂತಹ ಗಂಡ ಎಲ್ಲಿಯಾದರೂ ಸಿಗುತ್ತಾನೆ. ಹುಡುಗಿಯರು ಕೃಷ್ಣನ್ನು ಇಷ್ಟಪಡುತ್ತಾರೆಯೇ ವಿನಃ ಕೃಷ್ಣನಂತಹ ಗಂಡನನ್ನು ಬಯಸುವುದಿಲ್ಲ. ಬಹುತೇಕ ಹುಡುಗಿಯರು ಬಯಸುವುದು ರಾಮನಂತಹ ಗಂಡನನ್ನೇ. ಇಲ್ಲಿ ನಾನೂ ಕೂಡ ಅಷ್ಟೆ. ಶ್ರೀಕೃಷ್ಣನನ್ನು ಆರಾಧಿಸುತ್ತೇನೆ. ನನ್ನ ಬಯಕೆ ಮಾತ್ರ ಶ್ರೀರಾಮಚಂದ್ರನೇ ಆಗಿರುತ್ತಾನೆ.

◆ **ಕಥೆಯ ಸಂಘರ್ಷದ ಬಗ್ಗೆ ಹೇಳುವುದಾದರೆ..**

ಒದೊಂದು ಪಾತ್ರವೂ ಬೇರೆ ಬೇರೆಯ ರೀತಿಯಲ್ಲೇ ನಿರೂಪಣೆಯಾಗಿವೆ. ನನ್ನನ್ನು ನೋಡುವವರು ತಾಳ್ಮೆಯನ್ನು ಕಲಿಯಬಹುದು. ಗೊತ್ತಿಲ್ಲದಂತೆ ವೀಕ್ಷಕರ ಮನಸ್ಸನ್ನೂ 'ರಾಧಾ' ಪ್ರಭಾವಿಸುತ್ತಾಳೆ. ಏನೇ ಕಷ್ಟ ಬಂದರೂ ಅದನ್ನು ನಾವು ಎದುರಿಸಬೇಕು. ಅದು ಸಾಧ್ಯವಿದೆ ಎನ್ನುವ ಅರಿವು ಇಲ್ಲಿದೆ. ಯಾರನ್ನೇ ಮಾತನಾಡಿಸುವಾಗ ಕೂಡ ಪ್ರೀತಿಯಿಂದ ಮಾತನಾಡಿಸಬೇಕು ಬೈದು ಮಾತನಾಡಿಸುವ ಅಗತ್ಯ ಇಲ್ಲ. ಅಪ್ಪ– ಅಮ್ಮನ ಪ್ರೀತಿ, ಅಣ್ಣ– ತಂಗಿಯ ಮಧುರ ಬಾಂದವ್ಯಕ್ಕೆ ಸಾಕ್ಷಿಯಾಗಿದೆ. ಸಂಬಂಧ, ಕೌಟುಂಬಿಕ ಮೌಲ್ಯಗಳನ್ನು ಇಲ್ಲಿ ತುಂಬಲಾಗಿದೆ. ನೋಡುಗರಿಗೆ ಕುಟುಂಬದ ಪರಸ್ಪರ ಪ್ರೀತಿ– ತ್ಯಾಗವನ್ನು ಇದು ತೋರಿಸುತ್ತದೆ.

◆ **ನಿಮ್ಮ ನಟನಾ ಪರಿಶ್ರಮದ ಬಗ್ಗೆ ಹೇಳುವುದಾದರೆ...**

ನನಗೆ ನಟನೆ ಬಗ್ಗೆ ಆಸಕ್ತಿಯೇ ಇರಲಿಲ್ಲ. ಈ ಬಗ್ಗೆ ಯಾವತ್ತೂ ಯೋಚನೆಯನ್ನೂ ಮಾಡಿರಲಿಲ್ಲ. ಆರಂಭದಲ್ಲಿ ಬಣ್ಣದ ಒಲವನ್ನು ಒತ್ತಾಯದಿಂದಲೇ ನನ್ನ ಮೇಲೆ ಹೇರಲಾಯಿತು. ನಮ್ಮ ಕುಟುಂಬದ ಸ್ನೇಹಿತರೊಬ್ಬರು ತುಳು ಸಿನಿಮಾ ಒಂದಕ್ಕೆ ಬಣ್ಣ ಹಚ್ಚುವಂತೆ ಹೇಳಿದರು. ಅವರ ಒತ್ತಾಸೆಗೆ ಮಣಿದು ಅದನ್ನು ಮಾಡಿದೆ. ನಂತರ ನನ್ನ ಗೆಳತಿ ಕನ್ನಡ ಧಾರಾವಾಹಿಗೆ ಆಡಿಷನ್ ನೀಡಲು ಹೊರಟಿದ್ದಳು, ಅವಳ ಜೊತೆ ನಾನೂ ಹೋಗಿದ್ದೆ. ಅಲ್ಲಿ ಅಪ್ರಯತ್ನ ಪೂರಕವಾಗಿ ನನಗೆ ಪಾತ್ರಕ್ಕೆ ಅವಕಾಶ ಸಿಕ್ಕಿತು. ಆಗ ಪಿಯು ಓದುತ್ತಿದ್ದೆ. ಓದಿನ ಕಾರಣಕ್ಕೆ ಆ ಅವಕಾಶವನ್ನು ನಿರಾಕರಿಸಿದ್ದೆ. ಕೆಲವೇ ದಿನಗಳು ಕಳೆಯುತ್ತಿದ್ದಂತೆ ಮತ್ತೆ ತುಳು ಸಿನಿಮಾಗೆ ಅವಕಾಶ ಸಿಕ್ಕಿತು. ಆಗ ಅಮ್ಮ 'ಎಲ್ಲರಿಗೂ ಹೀಗೆ ಅವಕಾಶಗಳು ಸಿಗುವುದಿಲ್ಲ. ನಿನಗೆ ಬರುತ್ತಿವೆ ನೀನು ನಟನೆಯನ್ನೇ ಮಾಡು' ಎಂದು ಹೇಳಿದರು. ಆಗಲೇ ನಾನು ನಟನೆಯನ್ನು ಆರಂಭಿಸಬೇಕು ಎಂದು ತೀರ್ಮಾನಿಸಿದೆ. 'ಮಂಗಳೂರು ಹುಡುಗಿ– ಹುಬ್ಬಳ್ಳಿ ಹುಡುಗ' ಧಾರಾವಾಹಿಯಲ್ಲಿ ನಾನು ನಿಜಕ್ಕೂ ಅಭಿನಯವನ್ನು ಕಲಿತೆ. ಅಲ್ಲಿ ನಾನು ಎಷ್ಟೇ ತಪ್ಪು ಮಾಡಿದರೂ ಯಾರೂ ಕೋಪಿಸಿಕೊಳ್ಳದೆ ಹೇಳಿಕೊಡುತ್ತಿದ್ದರು. ಆಗಲೇ ನಾನು ನಟನಾ ಕಲಿಕೆಯನ್ನು ಆರಂಭಿಸಿದಂತೆ ಆಯಿತು. ಇಷ್ಟವೂ ಕಷ್ಟವೋ ಬಂದಿದ್ದೇನೆ ಅಂದರೆ ಇಲ್ಲಿ ಏನಾದರೂ ಸಾಧಿಸಬೇಕು ಎಂದುಕೊಂಡಿದ್ದೇನೆ.

◆ **ನಿಮ್ಮ ಕನಸು ಏನಾಗಿತ್ತು?**

ಪುಟ್ಟ ಕನಸದು. ಫ್ಯಾಷನ್ ಡಿಸೈನಿಂಗ್ ಮಾಡಬೇಕು ಎಂದುಕೊಂಡಿದ್ದೆ. ಆ ವಿಷಯದಲ್ಲಿ ಪದವಿಯನ್ನು ಮುಗಿಸಿದ್ದೇನೆ. ನಟಿ ಆಗದಿದ್ದರೆ ಬೋಟಿಕ್ ಇಡಬಹುದಿತ್ತು. ಸಾಧ್ಯವಾದರೆ ವಿದೇಶಕ್ಕೂ ಹೋಗಬೇಕು ಎಂದುಕೊಂಡಿದ್ದೆ. ಅದಾಗದೆ ಕಲಾವಿದೆಯಾಗಿ ನನ್ನ ವೃತ್ತಿಬದುಕು ಬದಲಾಗಿದೆ. ಫ್ಯಾಷನ್ ಡಿಸೈನ್ ಈಗಲೂ ನನ್ನ ಆಸಕ್ತಿಯ ವಿಷಯ. ಸಮಯ ಸಿಗುತ್ತಿಲ್ಲ ಹಾಗಾಗಿ ಅದನ್ನು ಮುಂದುವರಿಸಲು ಆಗುತ್ತಿಲ್ಲ.



■ **ರಾಘವೇಂದ್ರ ಕೆ.**